## 14. ಕೋವಿಡ್–19 ಸೋಂಕು ನಿಯಂತ್ರಣಕ್ಕೆ ಕ್ರಮ

ಕೋವಿಡ್–19 ಸೋಂಕು ನಿಯಂತ್ರಣ ಜಾರಿಗೊಳಿಸಿರುವ ಲಾಕ್‌ಡೌನ್ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿರುವವರು ಹಾಗೂ ನಿರ್ಗತಿಕರಿಗೆ ನೆರವಾಗಲು ಬಿಬಿಎಂಪಿ 'ಸಹಾಯ ಸೇತುವೆ' ಅಪ್ಲಿಕೇಷನ್ ಅಭಿವೃದ್ಧಿಪಡಿಸಿದೆ. ಕೋವಿಡ್ –19 ಸೋಂಕಿನ ವಿರುದ್ದದ ಹೋರಾಟದಲ್ಲಿ ಭಾಗಿಯಾಗುವವರು ಹಾಗೂ ದೇಣಿಗೆ ನೀಡಲು ಇಚ್ಛಿಸುವ ವ್ಯಕ್ತಿಗಳು ಅಥವಾ ಸಂಘ ಸಂಸ್ಥೆಗಳು ಸ್ವಯಂ ಪ್ರೇರಿತ ಸೇವೆ ಸಲ್ಲಿಸಲು ಇಚ್ಛಿಸುವ ವೈದ್ಯರು ಬಿಬಿಎಂಪಿ ಜೊತೆ ಸಂಪರ್ಕ ಸಾಧಿಸಲು ಈ ಆ್ಯಪ್ ವೇದಿಕೆ ಕಲ್ಪಿಸಲಿದೆ.

**ಆ್ಯಪ್‌ನ ಪ್ರಯೋಜನಗಳು:–**

- ನಾಗರಿಕರು ಹಾಗೂ ಸ್ವಯಂಸೇವಾ ಸಂಸ್ಥೆಗಳು ಈ ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಂಡು ದೇಣಿಗೆ ನೀಡಬಹುದು.
- ನಿರ್ಗತಿಕರಿಗೆ ನೆರವಾಗಲು ಈ ಆ್ಯಪ್‌ನಲ್ಲಿ ಪಟ್ಟಿ ಮಾಡಲಾದ ಆಹಾರ ಸಾಮಗ್ರಿ ಅಥವಾ ಸರಕುಗಳನ್ನು ದಾನ ಮಾಡಬಹುದು. ಪಟ್ಟಿ ಮಾಡಿರದ ಸಾಮಗ್ರಿ ಅಥವಾ ಸರಕುಗಳನ್ನು ದೇಣಿಗೆ ನೀಡಲು ಕೋರಿಕೆ ಸಲ್ಲಿಸಬಹುದು.
- ಸಂಗ್ರಹ ಕೇಂದ್ರಗಳಿಗೆ ಸರಕು/ಸಾಮಗ್ರಿ ತಲುಪಿಸಲು ಪಾಸ್‌ಗಳನ್ನು ಈ ಆ್ಯಪ್ ಮೂಲಕವೇ ನೀಡಲಾಗುತ್ತದೆ. ದೇಣಿಗೆಗಾಗಿ ಸ್ವೀಕೃತಿ ನೀಡಲಾಗುತ್ತದೆ.
- ಸ್ವಯಂಸೇವಕರು ಮತ್ತು ವೈದ್ಯರು ತಾವು ನೀಡಬಯಸುವ ಸೇವೆಗಳನ್ನು ನೋಂದಾಯಿಸಬಹುದು.
- ಸ್ವಯಂಸೇವಕರಾಗಲು ಬಯಸುವವರು ನೋಂದಾಯಿಸಿ ಕೊಳ್ಳಬಹುದು.
- ವೈದ್ಯರು ತಮ್ಮ ವೈದ್ಯಕೀಯ ಪದವಿ ಪ್ರಮಾಣಪತ್ರ, ಪರವಾನಗಿ ಪತ್ರ, ವಿಳಾಸ, ಜಿಪಿಎಸ್ ಲೋಕೇಷನ್ ಮತ್ತು ಸೇವೆಗೆ ಲಭ್ಯವಿರುವ ಸಮಯವನ್ನು ನಮೂದಿಸಬೇಕು.
- ಜನರು ವಾಸಸ್ಥಳದ ಹತ್ತಿರವಿರುವ ವೈದ್ಯರ ಬಗ್ಗೆ ಆ್ಯಪ್ ಮೂಲಕ ತಿಳಿದುಕೊಂಡು, ಸೇವೆ ಪಡೆಯಬಹುದು.
- ಆಹಾರ ಸರಬರಾಜು, ಸ್ವಚ್ಛತಾ ಕಾರ್ಯ, ದೇಣಿಗೆ ಸಂಗ್ರಹ ಮತ್ತು ಕೈಗೊಂಡಿರುವ ಇತರೆ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆಯನ್ನೂ ಈ ಆ್ಯಪ್ ಮೂಲಕ ನಿರ್ವಹಿಸಬಹುದು.
- ಇಂದಿರಾ ಕ್ಯಾಂಟೀನ್, ಫೀವರ್ ಕ್ಲಿನಿಕ್‌ಗಳ ಮಾಹಿತಿಯೂ ಲಭ್ಯ.

**ಹೋಮ್ ಡೆಲಿವರಿ ಸಹಾಯವಾಣಿ:** ಲಾಕ್‌ಡೌನ್ ಸಂದರ್ಭದಲ್ಲಿ ಜನರ ಮನೆಗೆ ಅಗತ್ಯ ಸಾಮಗ್ರಿ ಹಾಗೂ ಔಷಧ ತಲುಪಿಸಲು ನೆರವಾಗಲು ಬೆಂಗಳೂರು ದಕ್ಷಿಣ ಪೊಲೀಸ್ ವಿಭಾಗ ವ್ಯಾಪ್ತಿಯಲ್ಲಿ ಇತ್ತೀಚೆಗೆ ಆರಂಭಿಸಿರುವ 'ಹೋಮ್ ಡೆಲಿವರಿ ಸಹಾಯವಾಣಿ' ಸೇವೆಯನ್ನು ನಗರದಾದ್ಯಂತ ವಿಸ್ತರಿಸಲು ಬಿಬಿಎಂಪಿ ಚಿಂತನೆ ನಡೆಸಿದೆ.

ಈ ಸಂಬಂಧ ಮಾನ್ಯ ಕಂದಾಯ ಸಚಿವ ಆರ್. ಅಶೋಕ ಹಾಗೂ ಮೇಯರ್ ಎಂ. ಗೌತಮ್ ಕುಮಾರ್ ನೇತೃತ್ವದಲ್ಲಿ ಸಭೆ ನಡೆಸಿ, ಈ ಸೇವೆಯನ್ನು ನಗರದಾದ್ಯಂತ ವಿಸ್ತರಿಸಲು ಬಿಬಿಎಂಪಿಯ ಪ್ರತಿ ವಲಯದ ಜಂಟಿ ಆಯುಕ್ತರು ಹಾಗೂ ಡಿಸಿಪಿಗಳ ನೇತೃತ್ವದಲ್ಲಿ ದಿನಸಿ, ತರಕಾರಿ ಔಷಧಿಗಳ ಮಳಿಗೆಗಳ ಸಮೀಕ್ಷೆ ನಡೆಸಿ ಜಿಯೋ ಟ್ಯಾಗಿಂಗ್ ಮಾಡಿ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ: 14.04.2020